ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಾವು ಹೇಳುತ್ತೇವೆ ಕುಳಿತುಕೊಳ್ಳಿ. ನೀವು ನಮಗೆ ಸಪೋರ್ಟ್ ಮಾಡುವುದಕ್ಕೆ ನಿಮ್ಮ ಕಾಲದಲ್ಲಿ ನಮಗೇನೂ 50 ಲಕ್ಷ ರೂಪಾಯಿ ಕೊಟ್ಟಿರಲಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಅಧಿಕಾರ ಅವರಿಗೆ ಇದೆ. ನೀವು ಏನು ಬೇಜವಾಬ್ದಾರಿಯಿಂದ ಮಾತನಾಡುತ್ತೀರಿ. ಸ್ವಲ್ಪ ಮರ್ಯಾದೆಯಿಂದ ಮಾತನಾಡಿ. ಕುಳಿತುಕೊಳ್ಳಿ ಎಂಬುದಕ್ಕೆ ನೀವು ಯಾರು? ನೀವು ಏನು ಮಾತನಾಡುತ್ತೀರಿ? ಮಾತನಾಡುವ ರೀತಿಯೇ ಇದು?

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶಟ್ಟಿ : ನಾವೂ ವಿರೋಧ ಪಕ್ಷದ ಸದಸ್ಯರಾಗಿ ಕೆಲಸ ಮಾಡಿದ್ದೇವೆ. ನಿಮಗೆ ನೈತಿಕತೆ ಆಧಾರದ ಮೇಲೆ ಮಾತನಾಡುವ ಹಕ್ಕಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ನಾನು ಮಾತನಾಡುವುದನ್ನು, ಕೇಳುವುದಕ್ಕೆ ನೀವು ತಯಾರಿಲ್ಲ. ಈಗ 25 ಲಕ್ಷ ರೂಪಾಯಿ ಬಗ್ಗೆ ಏನು ಹೇಳಿದ್ದೀರಿ ಅದಕ್ಕೆ ಅಲಾಯಿದ ಪಟ್ಟಿ ಕೊಡುತ್ತೇವೆಂದರು, ಕೊಡಲಿ. ನಾವು ಪಟ್ಟಿ ತೆಗೆದು ನೋಡಿದರೆ ಯಾವುದಕ್ಕೂ ಸರ್ಕಾರದ ಗ್ರಾಂಟ್ ಇಲ್ಲ. ಲೋಕೋಪಯೋಗಿ ಇಲಾಖೆಯಿಂದ ಕೆಲಸ ಆಗುತ್ತಿಲ್ಲ. ಹಾಗಾಗಿ ಸಣ್ಣ ನೀರಾವರಿ ಇಲಾಖೆಗೆ ಮತ್ತು ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣ ಕೊಡಿ. ಏಕೆಂದರೆ ಅಲ್ಲಿ ಮೂರನೇ ಒಂದು ಭಾಗ ಕೂಡ ಗ್ರಾಂಟ್ ಕೊಟ್ಟಿಲ್ಲ. ಒಂದಕ್ಕೊಂದು ಸಂಬಂಧ ಇಲ್ಲ. ನೀವು ಮಾಡಲಿಲ್ಲವೆಂದರೆ ನನಗೆ ಬೇಜಾರಿಲ್ಲ. ತಾವು ಪಟ್ಟಿ ಕೇಳಿದ್ದಿರಿ, ನಾವು ಪಟ್ಟಿ ಕೊಟ್ಟಿದ್ದೇವೆ. ನಿಮ್ಮ ಇಲಾಖೆಯಿಂದ ನನ್ನ ಕ್ಷೇತ್ರದಲ್ಲಿ ಒಂದು ಬ್ರಿಡ್ಜ್ ಇಲ್ಲ, ಒಂದು ರೋಡ್ ಇಲ್ಲ. ಅದನ್ನು ನೋಡಿ ನನಗೆ ಷಾಕ್ ಆಯಿತು. ನಾವು ಎರಡೆರಡು ಸಾರಿ ಕೇಳಿದ್ದೆವು. ನಿಮ್ಮ ಸರ್ಕಾರ ಇದೆ, ನೀವು ಅಧಿಕಾರದಲ್ಲಿದ್ದೀರಿ, ನಿಮ್ಮ ಡಿಸಿಷನ್ ಇದೆ. ಎಲ್ಲಿ ಯಾವ ಕೆಲಸ ತೆಗೆದುಕೊಳ್ಳಬೇಕೋ ಅಲ್ಲಿ ತೆಗೆದುಕೊಳ್ಳಿ. ನನ್ನ ಕ್ಷೇತ್ರದಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲವೆಂದರೆ ಏನೂ ತೊಂದರೆ ಇಲ್ಲ. ಆದರೆ ನಾನು ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತೇನೆ, ಲೋಕೋಪಯೋಗಿ ಇಲಾಖೆಗೆ ಮತ್ತು ಸಣ್ಣ ನೀರಾವರಿ ಇಲಾಖೆಗೆ ಹೆಚ್ಚಿನ ಹಣ ಕೊಟ್ಟರೆ ಕೆಲಸ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಎಷ್ಟೋ ಕಡೆ ಮೂರನೇ ಒಂದು ಭಾಗ ಗ್ರಾಂಟ್ ಕೊಟ್ಟಿಲ್ಲ. ಕಳೆದ ವರ್ಷ ಸ್ಪಿಲ್ ವರ್ಕ್ಸ್‌ಗೆ 5-10 ಸಾವಿರ ರೂಪಾಯಿ ಗ್ರಾಂಟ್ ಕೊಟ್ಟಿದ್ದಾರೆ. ಇದು ಸರಿಯಲ್ಲ. ಹಾಗಾಗಿ ಅದನ್ನು ತಾವು ಪರಿಶೀಲನೆ ಮಾಡಿ ಎಲ್ಲಾ ಶಾಸಕರಿಗೆ ಕೊನೇಪಕ್ಷ ಮಿನಿಮಂ ಕೆಲಸ ಬರುವ ಹಾಗೆ ವ್ಯವಸ್ಥೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಸಭಾಪತಿಗಳೇ, ನಾನು ಆಯವ್ಯಯ ಮಂಡನೆ ಮಾಡುವಾಗ ಏನು ಹೇಳಿದ್ದೇನೆಂದರೆ ಇದಕ್ಕೆ ಸಂಪೂರ್ಣವಾದ ಮಾಹಿತಿಗಳು ಮಾನ್ಯ ಸದಸ್ಯರಿಂದ ಬರುವಾಗ ತಡವಾಗಿ, ಸರಿಯಾದ ವ್ಯವಸ್ಥೆ ಆಗಲಿಲ್ಲ. ಅದಕ್ಕೆ ಪ್ರತ್ಯೇಕವಾಗಿ ನಾವು ಅನ್‌ಸ್ಟಾರ್ 1-2 ಎಂದು ಅಧಿವೇಶನ ಮುಗಿಯುವುದರೊಳಗೆ ಕೊಡುತ್ತೇವೆಂದು ಮಾತು ಕೊಟ್ಟಿದ್ದೆ. ಆ ಮಾತಿನ ಪ್ರಕಾರ ಇವತ್ತು ಪಟ್ಟಿ

ಕೊಟ್ಟಿದ್ದೇವೆ. 20 ಲಕ್ಷದ ಕಾಮಗಾರಿ ಏನಿದೆ ಅದು ಪಟ್ಟಿಯಲ್ಲಿ ಸೇರಿಲ್ಲ. ಏಕೆಂದರೆ ಅದಕ್ಕೆ ಆದ್ಯತೆ ಮೇಲೆ ಮಾನ್ಯ ಸಚಿವರೇ ಪಟ್ಟಿ ಕೊಡಬೇಕು. ಅದರ ಆದ್ಯತೆ ಮೇಲೆ ಅವರು ಪ್ರತ್ಯೇಕ ಪಟ್ಟಿ ಮಾಡಿಕೊಂಡು ಪ್ರತ್ಯೇಕವಾಗಿ ಮಾಡುತ್ತಾರೆ. ಆದಷ್ಟು ಜಾಗ್ರತೆ ಪಟ್ಟಿ ಕೊಟ್ಟರೆ, ಅಂದರೆ ಎಷ್ಟು ಜಾಗ್ರತೆ ನೀವು ಪಟ್ಟಿ ಕೊಡುತ್ತೀರಿ ಅಷ್ಟು ಜಾಗ್ರತೆ ಕಾಮಗಾರಿ ಕೆಲಸ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇವತ್ತು ಕೊಟ್ಟಿದ್ದರಲ್ಲಿ ಅದನ್ನು ಸೇರಿಸಲಿಲ್ಲ. ಏಕೆಂದರೆ ಆ ಪಟ್ಟಿಯನ್ನು ಆದ್ಯತೆಯ ಮೇಲೆ ತಯಾರು ಮಾಡಬೇಕಾಗುತ್ತದೆ. ಅದರ ಹೊರತಾದಂತಹ ಪಟ್ಟಿ ಇದು. ಇದು ಒಂದು ಹೇಳಿಕೆಯನ್ನು ನಾನು ಮಾಡುತ್ತೇನೆ. ಸ್ವಲ್ಪ ಸಾವಧಾನವಾಗಿ ಆಲಿಸಬೇಕು.

1993-94ನೇ ಸಾಲಿಗೆ ಸಣ್ಣ ನೀರಾವರಿ ಕಾಮಗಾರಿಗಳಲ್ಲಿ 4,702 ಸಣ್ಣ ನೀರಾವರಿ ಮೇಲಿನ ಬಂಡವಾಳ ಲೆಕ್ಕ ಶೀರ್ಷಿಕೆಯಲ್ಲಿ 61.17 ಕೋಟಿ ರೂಪಾಯಿಗಳನ್ನು ಒದಗಿಸಿದೆ. 1993-94ನೇ ಸಾಲಿನ ಅನುಬಂಧದಲ್ಲಿ ಈ ಕೆಳಕಂಡ ಹೊಸ ಕಾಮಗಾರಿಗಳನ್ನು ಸೇರಿಸಲಾಗಿದೆ.

		ಸಂಖ್ಯೆ	
1	ಹೊಸ ಕೆರೆಗಳು	52	672.75 ಕೋಟಿ
2.	ಕೆರೆ ಕಲ್ಯಾಣ	187	772.40 ಕೋಟಿ
3.	ಆಣೆಕಟ್ಟುಗಳು	72	274.00 ಕೋಟಿ
4.	ಏತ ನೀರಾವರಿ ಯೋಜನೆಗಳು	63	664.20 ಕೋಟಿ

ಒಟ್ಟು 324 ಕೆಲಸಗಳು. 73 ಕೋಟಿ 63 ಲಕ್ಷದ 36 ಸಾವಿರ. ಮೇಲಿನ ಅನುಬಂಧ-೫ ನಲ್ಲಿ ಅನೇಕ ತೆರನಾದ ಶೀರ್ಷಿಕೆಯ ಅಡಿಯಲ್ಲಿಯೂ ಹಾಗೂ ಕಾಮಗಾರಿಗಳ ಹೆಸರಿನಲ್ಲಿಯೂ ಅಥವಾ ಆಯವ್ಯಯದ ಹಣಕಾಸಿನಡಿಯಲ್ಲಿಯೂ ನಿಗದಿಪಡಿಸಿದ ಮೊತ್ತದಲ್ಲಿಯೂ ಕೆಲವು ಲೋಪದೋಷಗಳು ಕಂಡುಬಂದಿದ್ದರಿಂದ ಅನುಬಂಧ-೫ ಅನ್ನು ಪುನರ್‌ಪರಿಶೀಲಿಸಿ ಕೆಲವು ಹೊಸ ಕಾಮಗಾರಿಗಳಿಗೆ ಒದಗಿಸಿದ ಹಣವನ್ನು, ಅನುದಾನವನ್ನು ಮರುಹೊಂದಾಣಿಕೆ ಮಾಡಿಕೊಂಡು 89 ಹೆಚ್ಚುವರಿ ಹೊಸ ಕಾಮಗಾರಿಗಳನ್ನು ತಿದ್ದುಪಡಿಯ ಮೂಲಕ ಪ್ರಸ್ತುತ ಅಧಿವೇಶನದಲ್ಲಿ ಮಂಡಿಸಿದ್ದೇವೆ. ಮಾನ್ಯ ವಿಧಾನಸಭಾ ವಿಧಾನಪರಿಷತ್ತಿನ ಹಾಗೂ ಲೋಕಸಭಾ ಸದಸ್ಯರುಗಳಿಂದ ಆಯವ್ಯಯದಲ್ಲಿ ಸೇರಿಸಲು ಬಂದಿರುವ ಮನವಿಗಳಂತೆ ಇನ್ನೂ ಸುಮಾರು 400 ಕಾಮಗಾರಿಗಳು ಸೇರ್ಪಡೆಯಾಗಬೇಕಾಗಿದೆ. ಈ ಹೊಸ ಕಾಮಗಾರಿಗಳನ್ನು ಆಯವ್ಯಯದಲ್ಲಿ ಸೇರಿಸಲು ಹೆಚ್ಚುವರಿ ಅನುದಾನ ಒದಗಿಸಿದರೆ ಮಾತ್ರ ಸಾಧ್ಯವಾಗುತ್ತದೆ. ಈ ಹೆಚ್ಚುವರಿ ಅನುದಾನವನ್ನು ಒದಗಿಸಲಿಕ್ಕೆ ನಾವು ಪ್ರತ್ಯೇಕ ಅದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇದಲ್ಲದೇ ಡಿಪಿಎಪಿ ಶೀರ್ಷಿಕೆಯಲ್ಲಿ ಈಗಾಗಲೇ ಕೈಗೆತ್ತಿಕೊಂಡು ವೆಚ್ಚ 5 ಲಕ್ಷ ರೂಪಾಯಿಗಳಿಂದ ಹೆಚ್ಚಾಗಿರುವುದರಿಂದ ಸದರಿ ಶೀರ್ಷಿಕೆಯಡಿಯಲ್ಲಿ ಅನುದಾನ ದೊರಕದಿರುವ ಕಾರಣ ಸುಮಾರು 19 ಕೆಲಸಗಳು ಸ್ಥಗಿತಗೊಂಡಿವೆ. ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸುಮಾರು 3.17 ಕೋಟಿ ರೂಪಾಯಿಗಳು ಬೇಕಾಗುವುದು ಎಂದು ಅಂದಾಜು ಮಾಡಲಾಗಿದೆ. ಸದರಿ ಕಾಮಗಾರಿಗಳು ಆಯವ್ಯಯ ಪಟ್ಟಿಯಲ್ಲಿ ಸೇರಿಲ್ಲ. ಈ ಕಾಮಗಾರಿಗಳನ್ನು ಮುಂದುವರಿಸಲು 1993-94ನೇ ಸಾಲಿನಲ್ಲಿ ಕನಿಷ್ಠ 1 ಕೋಟಿ ರೂಪಾಯಿಗಳನ್ನಾದರೂ

ಒದಗಿಸಬೇಕಾಗಿದೆ. ಆ ಹಣವನ್ನೂ ಕೂಡಾ, ಸಂಪನ್ಮೂಲವನ್ನು ಕೂಡ ನಾವು ಪ್ರತ್ಯೇಕವಾಗಿ ಒದಗಿಸುತ್ತಿದ್ದೇವೆ. ಮೇಲೆ ತಿಳಿಸಿದ ಸಂದರ್ಭದಲ್ಲಿ ಸಣ್ಣ ನೀರಾವರಿಗೆ 1993-94ನೇ ಸಾಲಿನಲ್ಲಿ ಕನಿಷ್ಠ 5 ಕೋಟಿ ರೂಪಾಯಿಗಳ ಹೆಚ್ಚುವರಿ ಅನುದಾನವನ್ನು ಒದಗಿಸಿದರೆ ಮಾನ್ಯ ಸದಸ್ಯರುಗಳು ಕೋರಿರುವ ಕೆಲವು ಹೊಸ ಕಾಮಗಾರಿಗಳನ್ನಾದರೂ ಈ ಸಾಲಿನ ಆಯವ್ಯಯದಲ್ಲಿ ಸೇರಿಸಿ ಮುಂದಿನ ಅಧಿವೇಶನದಲ್ಲಿ ಅನುಮೋದನೆ ಮಂಡಿಸಲು ಕ್ರಮ ತೆಗೆದುಕೊಳ್ಳಬಹುದು. ಈ 5 ಕೋಟಿ ಹೆಚ್ಚುವರಿಯನ್ನೂ ಕೂಡಾ ನಾವು ಒದಗಿಸಿದಾಗ ಹೆಚ್ಚು ಸ್ವಲ್ಪ ತೃಪ್ತಿ ಎಲ್ಲಾ ಸನ್ಮಾನ್ಯ ಸದಸ್ಯರಿಗೆ ಬರಲಿಕ್ಕೆ ಸಾಧ್ಯ ಆಗುತ್ತದೆ.

ಆದುದರಿಂದ ಇದು ಪರಿಪೂರ್ಣವಾದ ಪಟ್ಟಿ ಎಂದು ನಾನು ಹೇಳುವುದಕ್ಕೆ ಇಚ್ಛಿಸಪಡುವುದಿಲ್ಲ. ಇನ್ನೂ ಕೂಡ ಅದರಲ್ಲಿ ಲೋಪದೋಷ ಇದ್ದರೆ, ಅದನ್ನು ಸರಿಪಡಿಸುತ್ತೇವೆ. ಯಾವಾಗಲೂ ಪ್ರತಿವರ್ಷ ಕೂಡ ಅದು ಅವಸರವಾಗಿ ಆ ಪ್ರಥಮ ಪುಸ್ತಕದಲ್ಲಿ ಬರುವುದೇ ಇಲ್ಲ. ಆದುದರಿಂದ ಸಾಕಷ್ಟು ತಾರತಮ್ಯ ಕೂಡ ರೀಜನಲ್ ವೈಸ್, ಡಿಸ್ಟ್ರಿಕ್ ವೈಸ್, ಕಾನ್‌ಸ್ಟಿಟ್ಯೂಯನ್ಸಿ ವೈಸ್ ಅದು ಬರುವುದನ್ನು ಸ್ವಲ್ಪ ಕಡಿಮೆ ಮಾಡಿದ್ದೇವೆ. ಇನ್ನೂ ಸರಿ ಮಾಡಿಸಲಿಕ್ಕೆ ನಾವು ಅದನ್ನು ವಿವರಗಳು ಏನಾದರೂ ವ್ಯತ್ಯಾಸ ಇದ್ದರೆ ನಾವು ಅದನ್ನು ರೀ-ಅಡ್ಜಸ್ಟ್ ಮಾಡುವುದಕ್ಕೆ ಸಾಧ್ಯವಿದೆ. ನಾವು ರೀಅಪ್ರೋಪ್ರಿಯೇಷನ್ ಕೂಡ ಮಾಡಬಹುದು. ಆದುದರಿಂದ ಇನ್ನೂ 5 ಕೋಟಿ ರೂಪಾಯಿಗಳನ್ನು ಸಣ್ಣ ನೀರಾವರಿಗೆ ಕೊಡಬೇಕೆಂದು ನಾವು ಅಪೇಕ್ಷೆ ಪಟ್ಟಿದ್ದೇವೆ. ಅದೇ ಪ್ರಕಾರ ಬೇರೆ ಕಾಮಗಾರಿಗಳೂ ಕೂಡಾ 20 ಲಕ್ಷದ ಕಾಮಗಾರಿಗಳಿಗೆ ತಾವು ಪಟ್ಟಿ ಕೊಟ್ಟರೆ, ಪಟ್ಟಿ ಕೊಟ್ಟ ಕೂಡಲೇ ನಾವು ಹಣ ಬಿಡುಗಡೆ ಮಾಡುತ್ತೇವೆ. ಕಾಮಗಾರಿ ಕೈಗೊಳ್ಳಬಹುದು. ಇನ್ನೂ ಏನಾದರೂ ಈ ಪುಸ್ತಕದಲ್ಲಿ ಎರಡು ಅನೆಕ್ಸರ್ಸ್ ಇದೆ. ತಾವು ದಯಮಾಡಿ ಇದನ್ನೆಲ್ಲಾ ಪರಿಶೀಲನೆ ಮಾಡಿಕೊಂಡು ತಮ್ಮ ಸಲಹೆಗಳು ಏನಾದರೂ ಇದ್ದರೆ, ಏಕೆಂದರೆ ಪೂರ್ತಿ ತೃಪ್ತಿಪಡಿಸಲಿಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದರೆ ಮಿನಿಮಮ್ ಸ್ಯಾಟಿಸ್‌ಫ್ಯಾಕ್ಷನ್ ಟು ಆಲ್ ದಿ ಅಸೆಂಬ್ಲಿ ಕಾನ್‌ಸ್ಟಿಟ್ಯುಯೆನ್ಸಿಸ್ ಕೊಡತಕ್ಕ ಪ್ರಯತ್ನ ಅಂತೂ ಖಂಡಿತವಾಗಿ ನಾವು ಮಾಡುತ್ತೇವೆ ಎಂದು ಹೇಳುತ್ತೇನೆ. ಈ ಬಗ್ಗೆ ಚರ್ಚೆ ಬೇಕಾಗಿಲ್ಲ. ದಯಮಾಡಿ ಓದಿ ಸ್ಪಷ್ಟ ಮಾಡಿಕೊಂಡು ಅದಕ್ಕೆ ಸಲಹೆ ಕೊಡಿ. ಮತ್ತೆ ಸಲಹೆ ಕೊಟ್ಟ ಮೇಲೆ ನಾವು ಪ್ರತ್ಯೇಕವಾಗಿ ಅದಕ್ಕೆ ಯಾವ ರೀತಿಯಲ್ಲಿ ಕಾರ್ಯಕ್ರಮ ಮಾಡಬೇಕೋ ಅದನ್ನು ಖಂಡಿತವಾಗಿ ಮಾಡುತ್ತೇವೆ.

ಶ್ರೀ ಕೆ. ಕರಿಯಣ್ಣ : ಮಾನ್ಯ ಅಧ್ಯಕ್ಷರೇ, ಕೆರೆ ಬಗ್ಗೆ ನನ್ನ ಕ್ಷೇತ್ರಕ್ಕೆ ಒಂದು ರೂಪಾಯಿ ಕೊಟ್ಟಿಲ್ಲ. ನಾನು ಕೆರೆಗೆ 3 ಲಕ್ಷ ರೂಪಾಯಿ ಮಾತ್ರ ಕೇಳಿದ್ದೆ. ಸಣ್ಣ ನೀರಾವರಿಗೆ ಬರೇ 3 ಲಕ್ಷ ರೂಪಾಯಿ ರಿಲೀಸ್ ಮಾಡಬೇಕೆಂದು ಕೇಳಿದ್ದೆ. ನನ್ನ ಕ್ಷೇತ್ರಕ್ಕೆ ಒಂದೇ ಒಂದು ರೂಪಾಯಿ ಕೊಟ್ಟಿಲ್ಲ.

ಅಧ್ಯಕ್ಷರು : ಆಮೇಲೆ ತಮಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಮ್ಮ ಕ್ಷೇತ್ರಗಳಲ್ಲಿ ಒಂದು ರೂಪಾಯಿ ಕೆಲಸ ಕೂಡ ಆಗಿಲ್ಲ. ನಮಗೆ ಮಾತನಾಡಲಿಕ್ಕೆ ಅದಕ್ಕಾದರೂ ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಮುಖ್ಯಮಂತ್ರಿಗಳು ಏನು ಹೇಳಿದರು ಎಂದು ತಾವು ಕೇಳಲಿಲ್ಲವೇ?

ಶ್ರೀ ಬಿ. ಹೆಚ್. ಬನ್ನಿಕೋಡ್: ನಮ್ಮ ಕ್ಷೇತ್ರದ ಬಗ್ಗೆ ಹೇಳಲಿಕ್ಕೆ ದಯವಿಟ್ಟು ತಾವು ಅವಕಾಶವನ್ನು ಕೊಡಬೇಕು. ಸರ್ಕಾರದ ಕೆಲಸ ಏನು ನಡೆಯುತ್ತಿದೆ, ಯಾವ ರೀತಿ ಇದೆ, ಲೋಕೋಪಯೋಗಿ ಇಲಾಖೆಯಲ್ಲಿ ಯಾವ ರೀತಿಯಲ್ಲಿ ರಸ್ತೆಗಳನ್ನು ಮಾಡುತ್ತಿದ್ದಾರೆಂದರೆ, ರಾಜ್ಯ ರಸ್ತೆ ಸಾರಿಗೆಯ ಬಸ್ಸುಗಳನ್ನು ಬಂದ್ ಮಾಡುತ್ತೇವೆಂದು ಹೇಳಿದ್ದಾರೆ. ಈ ಸದನದ ಮೂಲಕ ನಾವು ಜನರಿಗೆ ಹೇಳಬೇಕಾಗಿದೆ. ದಯವಿಟ್ಟು ನಮಗೆ ಸಮಯ ಕೊಡಿಯೆಂದು ನಾವು ಕೇಳುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ನನ್ನ ಸಮಸ್ಯೆ ಏನೆಂದರೆ, ನಾನು ಕಳೆದ ನಾಲ್ಕು ವರ್ಷಗಳಿಂದ ಈ ಮನವಿಯನ್ನು ಕೊಡುತ್ತಿದ್ದೇವೆ. ನನ್ನ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯಿಂದ ಒಂದು ಸೇತುವೆ ಸಹ ಆದದ್ದು ಇಲ್ಲ. ಮತ್ತು ರಸ್ತೆಗಳ ಬಗ್ಗೆ ಬಹಳಷ್ಟು ಅಂದರೆ ಎರಡು ವರ್ಷಗಳಿಂದ ರಸ್ತೆಗಳು ಅವಗ್ರೇಡ್ ಆದ ಸಂದರ್ಭದಿಂದ ಈ ರಸ್ತೆಗಳ ಡಾಮರೀಕರಣದ ಬಗ್ಗೆ ಅರ್ಜಿಯನ್ನು ಕೊಟ್ಟಿದ್ದೇವೆ. ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ತಮ್ಮ ಪಟ್ಟಿಯನ್ನು ಕೊಡಬೇಕು ಎಂದು ; ಅದು 25 ಲಕ್ಷ ರೂಪಾಯಿ ಒಳಗಡೆ ಇರತಕ್ಕದ್ದನ್ನು ಆದ್ಯತೆಯ ಮೇಲೆ ಕೊಡುತ್ತೇವೆಂದು ಹೇಳಿದರು. ಈ ಬಗ್ಗೆ ನನ್ನ ಅಭಿಪ್ರಾಯ ಅಂದರೆ ನಾವು ಕೊಟ್ಟಿರುವಂತಹ ಪಟ್ಟಿ ಅಲ್ಲಿ ಸೇರಲಿಕ್ಕೆ ಸಾಧ್ಯವಿಲ್ಲ. ಬಹಳಷ್ಟು ಅಡೆತಡೆಗಳು ಬಂದು ನಾವೇನು ಸೇರಿಸಿದ್ದೇವೆ. ಆ ಅಂದಾಜು ಪಟ್ಟಿಯಲ್ಲಿ ಅದು ಎಲ್ಲಿ ಹೋಗುತ್ತದೆ ಎನ್ನುವುದು ನಮಗೆ ಸ್ಪಷ್ಟವಾಗಿ ಗೊತ್ತಾಗುತ್ತಿಲ್ಲ. ನಾವು ಮಂತ್ರಿಗಳನ್ನು ನೋಡಿದ್ದೇವೆ. ಅವರು ಹೇಳುತ್ತಾರೆ, ಪ್ಲಾನಿಂಗ್‌ಗೆ ಹೋಗಿದೆ, ಫೈನಾನ್ಸ್‌ಗೆ ಹೋಗಿದೆ ಎಂದು; ನಾವು ಎಲ್ಲಿಗೆ ಹೋದರೆ ಆಗುತ್ತದೆ ಎನ್ನುವಂತಹದ್ದು ಸ್ಪಷ್ಟವಿಲ್ಲ. ಆದ್ದರಿಂದ ನಾನು ತಮ್ಮ ಮುಖೇನ ಕೇಳಿಕೊಳ್ಳುತ್ತೇನೆ, ಏನು 25 ಲಕ್ಷ ರೂಪಾಯಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ತೆಗೆದುಕೊಳ್ಳುತ್ತೀರಿ, ಅಲ್ಲೆಲ್ಲಾ ನಾವು ಶಾಸಕರು ಕೊಟ್ಟಂತಹ ಕೆಲಸಗಳು ಆದ್ಯತೆಯ ಮೇಲೆ ತೆಗೆದುಕೊಳ್ಳುವಂತಹ ಒಂದು ವ್ಯವಸ್ಥೆ ಯಾಗಬೇಕು.

ಶ್ರೀ ಜಿ. ರಾಜುಗೌಡ : ಈ ರೀತಿ ಸಭೆ ನಡೆಸಿದರೆ ರಾತ್ರಿ 10 ಗಂಟೆಯಾದರೂ ಸಭೆ ಮುಗಿಯುವುದಿಲ್ಲ; ಇದೇನು? ಸಭೆ ನಡೆಸತಕ್ಕ ರೀತಿ ಇದಲ್ಲ. ನಾವು ಎಷ್ಟು ಗಂಟೆಯ ತನಕ ಕುಳಿತುಕೊಳ್ಳುವುದಕ್ಕಾಗುತ್ತದೆ? ನಾವು ಬೆಳಿಗ್ಗೆ 9 ಗಂಟೆಗೆ ಬಂದಿದ್ದೇವೆ. ಈಗ ಗಂಟೆ 6-30 ಆಗುತ್ತಾ ಇದೆ. ನಾವು ಎಲ್ಲಿಯ ತನಕ ಕುಳಿತುಕೊಳ್ಳುವುದಕ್ಕಾಗುತ್ತದೆ? ಕಾರ್ಯಕ್ರಮದ ಪಟ್ಟಿಯ ಪ್ರಕಾರ ಸಭೆ ನಡೆಯಬೇಕು. ಈಗ ಇಲ್ಲಿ ಏನು ನಡೆಯುತ್ತಿದೆ? ಇದೇನು ಶೂನ್ಯವೇಳೆಯೇ? ಎಲ್ಲರೂ ಮಾತನಾಡುತ್ತಾರೆ 120 ಜನರು ಮಾತನಾಡುತ್ತಾರೆ. ಬೆಳಿಗ್ಗೆ 9-30 ಗಂಟೆಗೆ ನಾವು ಬಂದಿದ್ದೇವೆ. ದಯಮಾಡಿ ಕಾರ್ಯಕ್ರಮದ ಪ್ರಕಾರ ಸಭೆ ನಡೆಸಿ.

ಅಧ್ಯಕ್ಷರು : ಮಾನ್ಯ ರಾಜುಗೌಡರೇ, ಇದು ಕಡೆಯ ದಿವಸ. ಸದಸ್ಯರಿಗೆ ಏನಾದರೂ ಇದ್ದರೆ ಕೇಳಲಿಕ್ಕೆ ಅವಕಾಶ ಕೊಡುತ್ತೇನೆ. ನಾನು ಅವಕಾಶ ಕೊಡದಿದ್ದರೆ ತಾವೇ ಹೇಳುತ್ತೀರಿ, ನಮಗೆ ಅವಕಾಶ ಕೊಡುವುದಿಲ್ಲವೆಂದು. ತಾವು ಸ್ವಲ್ಪ ತಡೆದುಕೊಳ್ಳಬೇಕು. ಆದಷ್ಟು ಬೇಗ ಮುಗಿಸೋಣ. ಅವರು ಏನು ಹೇಳುತ್ತಾರೆ, ಅದನ್ನು ಏನು ಹೇಳುತ್ತಾರೆ, ಅದನ್ನು ಸ್ವಲ್ಪದರಲ್ಲಿ ಹೇಳಲಿ. ಈಗ ಡಾ : ನಾಗಪ್ಪನವರು ಹೇಳಲಿ. ನಂತರ ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ.

ಡಾ॥ ಮೈ. ನಾಗಪ್ಪ : ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಏಕೆಂದರೆ ಕುರಿಗಳು ಸತ್ತಿವೆ ಎಂದು ಅವರು ಪರಿಹಾರವನ್ನು ಕೊಟ್ಟಿದ್ದಾರೆ. ಆದರೆ ಮೊನ್ನೆ ನವೆಂಬರ್ ತಿಂಗಳಿನಲ್ಲಿ ಆದ ಮಳೆ ಹಾನಿಗೆ ರೈತರು ಫಲವತ್ತಾದ ಮಣ್ಣನ್ನು ಕಳೆದುಕೊಂಡು ಜೊತೆಗೆ ಬೆಳೆಯನ್ನು ಕಳೆದುಕೊಂಡರು. ಆಮೇಲೆ ಸಾವಿರಾರು ಪಂಪ್‌ಸೆಟ್‌ಗಳನ್ನು ಕಳೆದುಕೊಂಡರು. ಈಗ ಅವರು ಕುರಿಗೆ ಅಷ್ಟೇ ಪರಿಹಾರ ಹೇಳಿದರು. ಪಂಪ್‌ಸೆಟ್ಟು ಬಗ್ಗೆ ಏನೂ ಹೇಳಲಿಲ್ಲ. ಸುಮಾರು ಜನ ಸಣ್ಣ ಮತ್ತು ಅತಿಸಣ್ಣ ರೈತರು ಕೋಆಪರೇಟಿವ್ ಬ್ಯಾಂಕುಗಳಿಂದ ಸಾಲ ತೆಗೆದುಕೊಂಡಿದ್ದಾರೆ. ಅದರ ಮೇಲೆ ಸಾಕಷ್ಟು ಬಡ್ಡಿ ಬೆಳೆದುಕೊಳ್ಳುತ್ತಾ ಹೋಗಿದೆ. ಆ ಬಡ್ಡಿಯನ್ನು ಏನಾದರೂ ಮುಖ್ಯಮಂತ್ರಿಗಳು ಮನ್ನಾ ಮಾಡುತ್ತಾರೆಯೇ? ಅದರ ಬಗ್ಗೆ ಏನಾದರೂ ಆಶ್ವಾಸನೆಯನ್ನು ಕೊಡುತ್ತಾರೆಯೇ ಎಂದು ನಾನು ಕೇಳುತ್ತಾ ಇದ್ದೇನೆ.

ಶ್ರೀ ವಿ. ಬಸವರಾಜ್ : ಮೊನ್ನೆ ಮಳೆಯಲ್ಲಿ ನನ್ನ ಕ್ಷೇತ್ರದಲ್ಲಿರುವ ಹೊಳೆದಂಡೆ ಕೊಚ್ಚಿಹೋಗಿಬಿಟ್ಟಿದೆ. ಅದರ ರಿಪೇರಿ ಕೆಲಸ ಮಳೆಗಾಲಕ್ಕೆ ಮೊದಲು ಆಗದೇ ಹೋದರೆ ತುಂಬಾ ತೊಂದರೆಯಾಗುತ್ತದೆ. ಹೊಳೆದಂಡೆ ಬದಿಯಲ್ಲಿರುವ ಜಮೀನು ಎಲ್ಲಾ ಕೊಚ್ಚಿಹೋಗಿದೆ. ಇದರ ರಿಪೇರಿ ಕೆಲಸ ಮಳೆಗಾಲದ ಒಳಗಡೆ ಆಗಬೇಕಾಗಿದೆ. ಸುಮಾರು ನಾಲ್ಕು ಲಕ್ಷ ರೂಪಾಯಿಗಳ ಈ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳಬೇಕು. ಹಾಗೂ ಮುಂದಿನ ಮಳೆಗಾಲದ ಒಳಗೆ ಇದರ ರಿಪೇರಿ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ನನ್ನ ತಾಲ್ಲೂಕಿನ ಬಗ್ಗೆ ಕೇಳುತ್ತಿಲ್ಲ. ಒಂದು ಪ್ರಮುಖವಾದ ವಿಚಾರ ಇದೆ. ಈಗ ತಿದ್ದುಪಡಿ ಏನೋ ಇಟ್ಟಿದ್ದಾರೆ. ಇದರಲ್ಲಿ ಒಂದು ಮಾತನ್ನು ಹೇಳಿದ್ದೀರಿ. ಕೆಲವು ಕೆಲಸಗಳು ಆಯವ್ಯಯದಲ್ಲಿ ಸೇರಿದ್ದು ಮುದ್ರಿತವಾಗಿಲ್ಲ ಎಂದು ಹೇಳಿದ್ದೀರಿ. ಯಾವ್ಯಾವ ಕೆಲಸಗಳು ಮುದ್ರಿತವಾಗಿಲ್ಲ ಎಂಬುದನ್ನು ದಯವಿಟ್ಟು ತಿಳಿಸಬೇಕು. ಇನ್ನೊಂದು ವಿಷಯ; ಈ ವರ್ಷ ಲೋಕೋಪಯೋಗಿ ಇಲಾಖೆಗೆ ಹೊಸ ಕೆಲಸಗಳಿಗೆ ಕೇವಲ 6.5 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಇದು ಯಾವುದಕ್ಕೂ ಸಾಲುವುದಿಲ್ಲ. ದಯವಿಟ್ಟು ಇನ್ನೊಂದು 6 ಕೋಟಿಯನ್ನು ಈ ಇಲಾಖೆಗೆ ಕೊಡಬೇಕೆಂದು. ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ ಇದರಲ್ಲಿ ಮೂರು ಜಿಲ್ಲೆಗಳಿಗೆ ಮಾತ್ರ ಸಿಗುತ್ತದೆ. ಅವು ಯಾವುವು ಎಂದರೆ ಬೆಂಗಳೂರು, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಚಿತ್ರದುರ್ಗ ಜಿಲ್ಲೆಗಳು. ಈ ಮೂರು ಜಿಲ್ಲೆಗಳಿಗೆ ಮಾತ್ರ ಜಾಸ್ತಿ ಸಿಗುತ್ತದೆ. ನಿಮ್ಮ ಜಿಲ್ಲೆಗೂ

ಸಿಕ್ಕಿಲ್ಲ, ನನ್ನ ಜಿಲ್ಲೆಗೂ ಸಿಕ್ಕಿಲ್ಲ. ದಕ್ಷಿಣ ಕನ್ನಡ, ಚಿತ್ರದುರ್ಗ ಮತ್ತು ಬೆಂಗಳೂರು - ಈ ಮೂರು ಜಿಲ್ಲೆಗಳಿಗೆ ಜಾಸ್ತಿ ಗ್ರಾಂಟ್ ಸಿಕ್ಕಿದೆ. ನೀವು ಕೊಟ್ಟಿದ್ದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ದಯವಿಟ್ಟು ಇನ್ನೊಂದು ಐದಾರು ಕೋಟ ರೂಪಾಯಿಗಳಷ್ಟು ಹೆಚ್ಚು ಗ್ರಾಂಟ್ ಕೊಟ್ಟರೆ ಎಲ್ಲರಿಗೂ ಅನುಕೂಲವಾಗುತ್ತದೆ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಹೆಚ್. ಬನ್ನೀಕೋಡ್ : ಇವತ್ತು ಕೆ.ಎಸ್.ಆರ್.ಟಿ.ಸಿ. ಯವರು ಬಸ್ಸುಗಳನ್ನು ನಿಲ್ಲಿಸುತ್ತೇವೆ ಎಂದು ಹೇಳಿ ನೋಟೀಸನ್ನು ಕೊಟ್ಟಿದ್ದಾರೆ. ಬಸ್ಸುಗಳನ್ನು ಇಂತಿಂಥ ಕಡೆಗಳಲ್ಲಿ ನಿಲ್ಲಿಸುತ್ತೇವೆ, ರಸ್ತೆ ಸರಿಯಿಲ್ಲ ಹಾಳಾಗಿದೆ. ಆದ್ದರಿಂದ ನಾವು ಬಂದ್ ಮಾಡುತ್ತೇವೆ ಎಂದು ನೋಟೀಸ್ ಕೊಟ್ಟಿದ್ದಾರೆ. ಅತಿವೃಷ್ಟಿಯಿಂದ ಈ ತೊಂದರೆಯಾಗಿದೆ. ನಾನು ಪಿ.ಡಬ್ಲ್ಯೂ.ಡಿ. ಮಂತ್ರಿಗಳಿಗೆ ಹೇಳಿದ್ದಕ್ಕೆ ಅವರು ಒಂದು ನೋಟೀಸ್ ಕಳುಹಿಸಿದರು; ನಮಗೆ ಕೆಲಸದ ಬಗ್ಗೆ ವಿವರ ಕೊಡಿ ಅಂತ. ನಾವು ಬಹಳ ಸಂತೋಷದಿಂದ ಇಂತಹ ಕೆಲಸ ಮಾಡಿ ಎಂದು ವಿವರ ಕೊಟ್ಟೆವು. ಇವತ್ತು ಕೊನೆಯ ದಿವಸ ಈ ಪುಸ್ತಕವನ್ನು ಕೊನೆಯ ದಿವಸ ಈ ಪುಸ್ತಕವನ್ನು ನಮ್ಮ ಕೈಗೆ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಯಾವರೀತಿ ಅಭಿವೃದ್ಧಿಕೆಲಸಗಳು ನಡಿಯುತ್ತಿವೆ, ಯಾವ ರೀತಿ ಲೋಕೋಪಯೋಗಿ ಇಲಾಖೆ ಕೆಲಸ ಮಾಡುತ್ತಿದೆ, ಸರ್ಕಾರ ಯಾವ ರೀತಿ ಹಣ ಕೊಟ್ಟಿದೆ ಎಂದು ನಮಗೆ ತೋರಿಸಿಕೊಟ್ಟಿದ್ದಾರೆ. ಮುಖ್ಯಮಂತ್ರಿಗಳಿಗೆ ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಅಲ್ಲಿರತಕ್ಕಂಥ, ಪರಿಸ್ಥಿತಿಯಿಂದ ರಸ್ತೆ ಹಾಳಾಗಿದೆ. ನಾಳೆ ಬಸ್ಸುಗಳನ್ನು ನಿಲ್ಲಿಸುತ್ತಿದ್ದಾರೆಯೆ. ಇದರಿಂದ ಆಗತಕ್ಕಂಥ ಸಮಸ್ಯೆಯನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತಿದ್ದೇನೆ. ಹೆಚ್ಚಿನ ಹಣವನ್ನೂ ಪಿ.ಡಬ್ಲ್ಯೂಡಿಗೆ ಕೊಡಿ. ಅಲ್ಲೀಗ ಒಂದು ಪೈಸೆ ಇಲ್ಲ. ಅನೇಕ ಕ್ಷೇತ್ರಗಳಲ್ಲಿ ದುಡ್ಡಿಲ್ಲ. ಕೆಲವು ಕ್ಷೇತ್ರಗಳಿಗೆ ಮಾತ್ರ ಕೊಟ್ಟಿದ್ದಾರೆ. ಉಳಿದ ಬೇರೆ ಕಡೆಗಳಿಗೆ ಕೊಟ್ಟಿಲ್ಲ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳುತ್ತಿದ್ದೇನೆ, ಏನೆಂದರೆ ಕೂಡಲೇ ಸರ್ಕಾರಕ್ಕೆ ಹೆಚ್ಚಿಗೆ ಹಣ ಬಿಡುಗಡೆ ಮಾಡಬೇಕು ಎನ್ನುವುದು ಒಂದು. ಇನ್ನೊಂದು, ಹೊಸ ಕೆಲಸಗಳ ಯಾದಿಯನ್ನು ತಯಾರು ಮಾಡಿಕೊಂಡು ಈ ಕೆಲಸಗಳನ್ನು ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ನಮ್ಮದು ಒಂದೇ ಒಂದು ಕೆರೆ ರಿಪೇರಿ ಆಗಬೇಕಾಗಿದೆ, ಮೂರು ಲಕ್ಷ ರೂಪಾಯಿಗಳದ್ದು. ಈ ಸಾರಿ ಸೇರಿಸುತ್ತೇವೆ ಎಂದು ಮಂತ್ರಿಗಳು ನನಗೆ ಕಾಗದವನ್ನು ಬರೆದಿದ್ದರು. ಆದರೆ ಅದನ್ನು ಸಹ ಸೇರಿಸಿಲ್ಲ. ದಯವಿಟ್ಟು ಇದೊಂದು ಕೆರೆಯನ್ನು ಸೇರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಂಜುನಾಥ ಸಿ. ಕುನ್ನೂರು : ನಾನು 334 ಪ್ರಕಾರ ರೈತರ ಒಂದು ವಿಷಯದ ಬಗ್ಗೆ ನೋಟೀಸ್ ಕಳುಹಿಸಿಕೊಟ್ಟಿದ್ದೆ. ನಮ್ಮ ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕಿನೊಳಗೆ ನೆರೆಹಾವಳಿಯಿಂದ ರೈತರ ಬೆಳೆ ಸಂಪೂರ್ಣವಾಗಿ ಹಾಳಾಗಿ ಹೋಗಿದೆ. ಈ ಬಗ್ಗೆ ಸಂಬಂಧಪಟ್ಟ ಶಿಗ್ಗಾಂವಿಯ ತಹಸೀಲ್ದಾರರು

ಮತ್ತು ಸವಣೂರಿನ ತಹಸೀಲ್ದಾರರು ನೂರಕ್ಕೆ 21 ಪರ್ಸೆಂಟ್ ಆಣೆವಾರಿ ಮಾಡಿ ಕಳುಹಿಸಿದ್ದರು. ಆದರೆ ಅಲ್ಲಿರತಕ್ಕಂಥ ಅಸಿಸ್ಟೆಂಟ್ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರ್ ಅವರು ಒಲ್ಲೆಯೆಂದು ನಿರಾಕರಿಸಿದ್ದರಿಂದ, ಅಲ್ಲಿ ಈಗ ನೂರಕ್ಕೆ 37ರಿಂದ 50ರಷ್ಟು ಆಣೇವಾರಿ ಮಾಡಿ ಕಳುಹಿಸಿದ್ದಾರೆ. ಇದು ಏನಾಗಿದೆ ಎಂದರೆ, ಈ ಆಣೆವಾರಿ ಮಾಡತಕ್ಕ ಪದ್ಧತಿಯಲ್ಲಿ ಬಹಳ ತಪ್ಪಿದೆ. ಆದ್ದರಿಂದ ದಯವಿಟ್ಟು, ಆಣೆವಾರಿ ಪದ್ಧತಿಯನ್ನು ಮರ ಪರಿಶೀಲನೆ ಮಾಡಿ, ರೈತರಿಗೆ ಅನುಕೂಲವಾಗುವಹಾಗೆ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ : ಕಳೆದ ಅಕ್ಟೋಬರ್ ಮತ್ತು ನೆಂಬರ್‌ನಲ್ಲಿ, ನನ್ನ ತಾಲ್ಲೂಕಿನಲ್ಲಿ ಮಳೆ ಹಾನಿಯಿಂದ ಸುಮಾರು 72 ಕೆರೆಗಳು ಒಡೆದುಹೊಗಿವೆ. ಇವತ್ತು ಜೂನ್ ತಿಂಗಳಲ್ಲಿ ಮತ್ತೆ ಮಳೆ ಬಂದರೆ, ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಒಡೆದುಹೋಗಿರತಕ್ಕ ಕೆರೆಗಳನ್ನು ರಿಪೇರಿ ಮಾಡುವುದಕ್ಕೆ ಸರ್ಕಾರ ಇದುವರೆಗೂ ಹಣವನ್ನು ಬಿಡುಗಡೆ ಮಾಡಿಲ್ಲ. ಈಗ ನೂರಾರು ಎಕರೆಯಲ್ಲಿ ಫಸಲು ಹಾಕುವ ಹಾಗಿಲ್ಲ. ಮಳೆ ಬಂದರೆ ನೀರು ಹಾಗೆಯೇ ಹೋಗುತ್ತದೆ, ಒಡೆದಿರುವ ಕಟ್ಟೆ, ಕೆರೆಗಳನ್ನು ಕಟ್ಟದೇ ಇರುವುದರಿಂದ, ನೀರು ನಿಲ್ಲುವುದಿಲ್ಲ. ಆದ್ದರಿಂದ ಸರ್ಕಾರದವರು ಕೂಡಲೇ ಅತಿವೃಷ್ಟಿಯಿಂದ ಹಾನಿಯಾಗಿರುವುದಕ್ಕೆ ಹಣ ಬಿಡುಗಡೆ ಮಾಡಬೇಕು, ಈ ಕೆರೆಗಳ ರಿಪೇರಿ ಆಗಬೇಕು. ಎರಡನೆಯದು ಲೋಕೋಪಯೋಗಿ ಇಲಾಖೆಯ ಪುಸ್ತಕಗಳನ್ನು ಇಲ್ಲಿ ಕೊಟ್ಟಿದ್ದಾರೆ. ಇದರಲ್ಲಿ, ನೀರಾವರಿಗಾಗಲೀ, ಕಾಮಗಾರಿಗಾಗಲೀ, ರಸ್ತೆಗಾಗಲೀ ನನ್ನ ತಾಲ್ಲೂಕಿನಲ್ಲಿ ಒಂದು ಅಣೆ ದುಡ್ಡು ಕೊಟ್ಟಿಲ್ಲ. ಮಾನ್ಯಮುಖ್ಯಮಂತ್ರಿಗಳು ಇನ್ನೂ ಕೆಲವು ಕೆಲಸಗಳನ್ನು ತೆಗೆದುಕೊಂಡಿಲ್ಲವೆಂದು ಹೇಳಿದರು. ಆದರೆ, ಒಂದೊಂದು ಕ್ಷೇತ್ರಕ್ಕೆ ಕೊನೆಯ ಪಕ್ಷ ಸ್ವಲ್ಪ ಸ್ವಲ್ಪವಾದರೂ ಹಣ ಕೊಡುವುದು ಬೇಡವೆ. ದಯವಾಡಿ ಮುಖ್ಯಮಂತ್ರಿಗಳು ಈ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕು.

ವಿಷಯ : ಬೆಂಗಳೂರು ದಕ್ಷಿಣ ತಾಲ್ಲೂಕು ಹೂಡಿ ಗ್ರಾಮದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳನ್ನು ನೀಡಿರುವ ಬಗ್ಗೆ.

* ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ದಕ್ಷಿಣ ತಾಲ್ಲೂಕು ಹೂಡಿ ಗ್ರಾಮದಲ್ಲಿ, 1992-93ನೇ ಸಾಲಿನಲ್ಲಿ, ಆಶ್ರಯ ಯೋಜನೆ ಅಡಿಯಲ್ಲಿ , ನಿವೇಶನ ಹಂಚಿಕೆಯು, ಮಾರ್ಗಸೂಚಿ ಪ್ರಕಾರ ಆಗಿರುವುದಿಲ್ಲವೆಂದು ಸರ್ಕಾರಕ್ಕೆ ಅನೇಕ ಮನವಿಗಳು ಬಂದಿವೆ. ಅದರಂತೆ, ವಿಭಾಗಾಧಿಕಾರಿ, ಬೆಂಗಳೂರು ಅವರು ಈ ಮನವಿಗಳ ಬಗ್ಗೆ ತನಿಖೆ ಮಾಡಿ, ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದಾರೆ. ಹೂಡಿ ಗ್ರಾಮದ ಸರ್ವೆ ನಂ. 145,149,150 ಮತ್ತು 152ರಲ್ಲಿ ಅಂದಾಜು 70 ಎಕರೆ ಭೂಮಿಯನ್ನು, 1383 ನಿವೇಶನಗಳನ್ನಾಗಿ ಅಭಿವೃದ್ಧಿ ಪಡಿಸಿದ್ದು, ಈ ನಿವೇಶನಗಳನ್ನು ಫಲಾನುಭವಿಗಳಿಗೆ ದಿನಾಂಕಃ 26-7-92ರಂದು ವಿತರಿಲಾಗಿದೆ. ಈ 1383 ಅಲಾಟ್‌ಗಳಲ್ಲಿ, ಸುಮಾರು 850 ಮಂದಿ ಅಂಗವಿಕಲರಾಗಿದ್ದರು ಮತ್ತು ಅವರಿಗೆ 850 ನಿವೇಶನಗಳನ್ನು ಹಂಚಲಾಗಿತ್ತು. ಒಟ್ಟು ಅಲಾಟ್‌ಗಳಲ್ಲಿ 192 ಮಂದಿ ಹೂಡಿ ಗ್ರಾಮಕ್ಕೆ

ಸೇರಿದವರು ಎಂದು ತನಿಖೆಯಲ್ಲಿ ಕಂಡು ಬಂದಿದೆ. ನಿಗದಿದಾರರ ಸರಿಯಾದ ವಿಳಾಸ ಮತ್ತು ವರಮಾನ ಮತ್ತು ಇನ್ನಿತರ ವಿತರಣೆಗಳು ಇಲ್ಲವೆಂದು ತನಿಖೆಯಿಂದ ಬಂದಿದೆ. ಆದರೂ ಅವರುಗಳ ಪೈಕಿ, 192 ಫಲಾನುಭವಿಗಳು ಹೂಡಿ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ. ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳ ಹಂಚಿಕೆಯು, ನಿಶ್ಚಯಿಸಿದ ನಿಯಮಗಳ ಪ್ರಕಾರ, ಒಬ್ಬ ಫಲಾನುಭವಿಯು ಒಂದು ವರ್ಷಕ್ಕೆ 8,400 ರೂಪಾಯಿಗಿಂತ ಕಡಿಮೆ ಆದಾಯವನ್ನು ಹೊಂದಿರತಕ್ಕದ್ದು. ಈ ಫಲಾನುಭವಿ ಅಂಗವಿಕಲರ ಬಗ್ಗೆ, ಆದಾಯಕ್ಕೆ ಸಂಬಂಧಪಟ್ಟಂತೆ ಸರಿಯಾದ ದಾಖಲೆಗಳು ಇಲ್ಲ. ಈ ವಿವರಗಳನ್ನು ಪರಿಶೀಲನೆ ಮಾಡಬೇಕೆಂದು ಈಗಾಗಲೇ ಆದೇಶವನ್ನು ಕೊಟ್ಟಿದ್ದೇವೆ. ಬೆಂಗಳೂರು ನಗರದಲ್ಲಿ ಅನೇಕ ಕ್ಷೇತ್ರಗಳಿವೆ. ಅದೇ ರೀತಿ ಮಂಗಳೂರು ಇದೆ, ಹುಬ್ಬಳ್ಳಿ ಇದೆ, ಬೆಳಗಾಂ ಇದೆ. ಇಂತಹ ಪ್ರಮುಖ ನಗರಗಳಲ್ಲಿ ಭೂಮಿ ಬಹಳ ಬೆಲೆ ಬಾಳುತ್ತದೆ. ಇಲ್ಲಿ ಮುಖ್ಯವಾಗಿ ಉತ್ತರಹಳ್ಳಿ ಮತ್ತು ವರ್ತೂರು ಈ ಎರಡು ಕ್ಷೇತ್ರಗಳಲ್ಲಿ ಭೂಮಿ ಇದೆ. ಉಳಿದ ಶಾಸಕರ ಕ್ಷೇತ್ರಗಳಲ್ಲಿ ಭೂಮಿ ಆದರೆ ಬಡವರು ಇದ್ದಾರೆ, ಅರ್ಹತೆವುಳ್ಳವರು ಇದ್ದಾರೆ. ಇದರಲ್ಲಿ ಹೆಚ್ಚಾಗಿ, ಏನಾಗುತ್ತದೆಂದರೆ, ಈ ಭಾಗದ ಜನರೂ ಕೂಡ ಅಲ್ಲಿ ಹಾಕುತ್ತಾರೆ. ಆದರೆ, ನಮ್ಮ ಆಶ್ರಯ ಯೋಜನೆಯ ನಿಯಮಾವಳಿಯಲ್ಲಿ ಏನಿದೆ ಎಂದರೆ, ಆ ಗ್ರಾಮದವರಿಗೇ ಕೊಡಬೇಕು ಅಥವಾ ಆ ಕ್ಷೇತ್ರದವರಿಗೆ ಕೊಡಬೇಕು. ಅಲ್ಲಿ, ಇವರು ಇಲ್ಲದಿದ್ದರೂ ನೆರೆ ಗ್ರಾಮಕ್ಕೆ ಕೊಡಬೇಕೆಂದು ನಮ್ಮ ಆಶ್ರಯದಲ್ಲಿರತಕ್ಕಂತಾದ್ದು. ಆ ದೃಷ್ಟಿಯಿಂದ ನೋಡಿದರೆ, ವರ್ತೂರು ಮತ್ತು ಉತ್ತರ ಹಳ್ಳಿ ಕ್ಷೇತ್ರದ ಜನರಿಗೆ ಕೊಡಬಹುದೇ ಹೊರತು, ಬೆಂಗಳೂರಿನ ಉಳಿದ ಭಾಗಗಳ ಶಾಸಕರ ಕ್ಷೇತ್ರದವರಿಗೆ ಈ ಭೂಮಿಯನ್ನು ಕೊಡುವುದಕ್ಕಾಗುವುದಿಲ್ಲ. ಒಂದು ವೇಳೆ ಕೊಡಬೇಕಾದರೆ ಸರ್ಕಾರದಿಂದ ಆಶ್ರಯದ ಮಾರ್ಗಸೂಚಿಗೆ ವಿನಾಯಿತಿ ಬೇಕು. ವರ್ತೂರಿನಲ್ಲಿ, ಆ ಕ್ಷೇತ್ರದಲ್ಲಿ ಇದು ಕೊಡುವುದಕ್ಕೆ ಸರ್ಕಾರದಿಂದ ರಿಲ್ಯಾಕ್ಸೇಷನ್ ಕೊಡಬೇಕು. ಇದೊಂದು ತಾಂತ್ರಿಕ ದೋಷ ಇದೆ. ಈ ತಾಂತ್ರಿಕ ದೊಷದಿಂದ, ಅಲ್ಲಿ ಕೊಟ್ಟಿದ್ದು ಮಾರ್ಗಸೂಚಿ ಪ್ರಕಾರ ಪ್ರಕಾರ ಕ್ರಮವಾಗಿಲ್ಲ. ಆದರೆ, ಇದೊಂದು ದೊಡ್ಡ ಕಾಂಟ್ರವರ್ಸಿಯಾಗಿ, ವಿವಾದಾಸ್ಪದ ವಿಚಾರವಾಗಿ ನಮ್ಮ ಮುಂದೆ ಬಂದಿದೆ. ಈ ಸಮಸ್ಯೆ ಬೇರೆ ಕ್ಷೇತ್ರದಲ್ಲಿ ಕೂಡ ಬರಬಹುದು. ಆದರೆ ಇದು ಮಾರ್ಗಸೂಚಿ ಪ್ರಕಾರ ಸರಿಯಾಗಿಲ್ಲ. ತಾಂತ್ರಿಕ ಕಾರಣದಿಂದ ನಾವು ಇವತ್ತು ಇದರ ಮೇಲೆ ಬೇರೆಬೇರೆ ರೀತಿಯಲ್ಲಿ ಮಾಲಫೈಡ್ ಮಾಡತಕ್ಕಂಥಾದ್ದು. ಮತ್ತೊಂದು ಇನ್ನೊಂದು ಸರಿಯಲ್ಲ. ಇದು ಹೇಗೆ ಬಂತು ಅಂದರೆ, ನಿಶಾಸ್ ಎನ್ನುವ ಸಂಸ್ಥೆ ಎಂದು ಹೇಳಿ ಅವರು ಒಂದು ಕಡೆ ಈ ಆಶ್ರಯದಲ್ಲಿ ನಿಮಗೆ ಸೈಟ್ ನಿವೇಶನ ಬೇಕಾದರೆ ನಮಗೆ ಅರ್ಜಿಹಾಕಿ ಎಂದು. ಪ್ರಕಟಣೆ ಕೊಟ್ಟರು ಆದ್ದರಿಂದ ಇಂತಹ ಒಂದು ರೀತಿಯಲ್ಲಿ ಜನಗಳಿಗೆ ಸಂಶಯ ಬಂತು. ಇವರು ಮಾಡಿಕೊಳ್ಳುವುದಕ್ಕೆ ಇದನ್ನು ಮಾಡುತ್ತಿದ್ದಾರೆ ಅಂತ ಹೇಳಿ ಒಂದು ರೀತಿಯಲ್ಲಿ ಸಂಶಯ ಆಗಿದೆ. ಆದರೆ ಈ ನಿಶಾಸ್ ಸಂಸ್ಥೆಯವರಿಗೂ ಮತ್ತು ಈ ಟಾಸ್ಕ್ ಫೋರ್ಸ್ ಕಮಿಟಿಯವರಿಗೂ ನಿವೇಶನ ವಿತರಣೆ ಮಾಡಲಿಕ್ಕೆ ಅವರಿಗೂ ಇವರಿಗೂ ಯಾವುದೇ ರೀತಿಯ ಸಂಬಂಧ ನಮ್ಮ ವರದಿ ಪ್ರಕಾರ ಇಲ್ಲಿ ಬಂದಿಲ್ಲ ಮತ್ತು ಇದರ ಬಗ್ಗೆ ಈ ಸೈಟನ್ನು ಹಣವನ್ನು ತೆಗೆದುಕೊಂಡು ಯಾರಾದರೂ ಕೊಟ್ಟಿದ್ದಾರೆ ಎಂಬುದರ ಪುರಾವೆಗಳು ಕೂಡ